**OS No. 154/2024**
**ಪಿ.ಡಬ್ಲ್ಯೂ: 1**

**ದಿನಾಂಕ: 23-02-2025 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
ಸಾಕ್ಷಿಗೆ ಕನ್ನಡ ಮಾತನಾಡಲುಬರದ ಕಾರಣ ಶ್ರೀ ಎಂ.ಕೆ. ವಿ.ಎ ವಕೀಲರನ್ನು ಅನುವಾದ ಮಾಡಲು ಆಯ್ಕೆ ಮಡಲಾಯಿತು.

**ಪಾಟೀ ಸವಾಲು ಪ್ರತಿವಾದಿಯ ಪರ: ಶ್ರೀ ಆರ್.ಎಸ್.ಪಿ. ವಕೀಲರಿಂದಃ**

ಸದರಿ ಈ ದಾವೆಯನ್ನು ನಾನು 3 ಜನ ಸಹೋದರರು ಮತ್ತು ಒಬ್ಬ ಸಹೋದರಿಯ ವಿರುದ್ಧ ಸಲಿಸಿರುತ್ತೇನೆ. ನಾನು ಒಬ್ಬನೇ ದಾವೆ ಸಲ್ಲಿಸಿರುತ್ತೇನೆ. ನಾನು ನಿಜಾಮುದ್ದೀನ್ ಇವರ ವಿರುದ್ಧ ಮಾತ್ರ ದಾವೆ ಸಲ್ಲಿಸಿರುತ್ತೇನೆ. ನನ್ನ ತಂದೆ ಅಜಮುದ್ದೀನ್ ಮರಣ .ಹೊಂದಿರುತ್ತಾರೆ. ನನ್ನ ಸಹೋದರ ನೂರುದ್ದೀನ್ ಮರಣ ಹೊಂದಿರುತ್ತಾರೆ ಎಂದರೆ ಸರಿ ನೂರುದ್ದೀನ್ ರವರಿಗೆ ಮಕ್ಕಳು ಇರುತ್ತಾರೆ ಎಂದರೆ ಸರಿ. 3 ಜನ ಗಂಡು ಮಕ್ಕಳು ಮತ್ತು 2 ಜನ ಹೆಣ್ಣು ಮಕ್ಕಳು ಇದ್ದಾರೆ. ನೂರುದ್ದೀನ್ ರವರ ಮಕ್ಕಳ ಹೆಸರು ನನಗೆ ಹೇಳಲು ಬರುವುದಿಲ್ಲ. ನಾನು ಮತ್ತು ನನ್ನ ಸಹೋದರರು ಬೇರೆ-ಬೇರೆ ಕಡೆ ವಾಸವಾಗಿದ್ದೇವೆ ಎಂದರೆ ಸರಿ. ಪ್ರತಿವಾದಿ ನಂ1 ಮುಂಚೆ ಬಾಂಬೆ ಯಲ್ಲಿ ಇದ್ದರು ಎಂದರೆ ಸರಿ. ಈಗ ಹೈದ್ರಾಬಾದಿನಲ್ಲಿ ಇರುತ್ತಾರೆ ಎಂದರೆ ಸರಿ. ಬಾಂಬೆಯಲ್ಲಿ 20 ವರ್ಷಗಡಳ ಕಾಲ ಪ್ರತಿವಾದಿ ನಂ.1 ವಾಸವಾಗಿದ್ದರು ಎಂದರೆ ಸರಿ. ಪ್ರತಿವಾದಿ ನಂ. 1 ಟೀಲರಿಂಗ್ ಕೆಲಸ ಮಾಡುತ್ತಿದ್ದ ಎಂದರೆ ಸರಿ. ಟೇಲರಿಂಗ್ ನಿಂದ ಸಾಕಷ್ಟು ಆದಾಯ ಇತ್ತು ಎಂದರೆ ಸರಿಯಲ್ಲ.

ನಾನು ಟೇಲರಿಂಗ್ ಕೇಲಸ ಬಾಂಬೆಯಲ್ಲಿ ಮಾಡುತ್ತೇನೆ. ಸದರಿ ನಾನು ಮತ್ತು ಪ್ರತಿವಾದಿ ನಂ.1 ಒಂದೇ ಮನೆ ಮತ್ತು ಒಂದೇ ಕಡೆ ಕೆಲಸ ಮಾಡುತ್ತಿದ್ದೇವು. ಪ್ರತಿವಾದಿ ನಂ.4 ಕೂಡ ಟೇಲರಿಂಗ್ ಕೆಲಸ ನಮ್ಮ ಜೊತೆಗೆ ಮಾಡುತ್ತಿದ್ದರು. ಪ್ರತಿವಾದಿ ನಂ. 4 ಆಂಧ್ರ ಪ್ರದೇಶದ ಉತ್ಕಕೂರು ಜಿಲ್ಲೆಯ ವೆಂಕನಪೇಟ ಗ್ರಾಮದಲ್ಲಿ ಈಗ ವಾಸವಾಗಿದ್ದರು ಎಂದರೆ ಸರಿ. ಪ್ರತಿವಾದಿ ನಂ.4 ಮದುವೆಯಾದ ನಂತರ ಬಳಿಚಕ್ರದಲ್ಲಿ ವಾಸವಾಗಿರುತ್ತಾರೆ. ನಾವು ಬೇರೆ ಇರುವುದರಿಂದ ನಮ್ಮ ನಮ್ಮ ಕುಟುಂಬವನ್ನು ಪ್ರತ್ಯೇಕವಾಗಿ ನಿರ್ವಹಣೆ

ಮಾಡುತ್ತಿದೆವೆ ಎಂದರೆ ಸರಿ. ನನ್ನ ತಾಯಿ ಮರಣ ಹೊಂದಿರುತ್ತಾರೆ. ನನ್ನ ತಂದೆ, ನನ್ನ ತಾಯಿಕ್ಕಿಂತ ಮೊದಲು ಮರಣ ಹೊಂದಿರುತ್ತಾರೆ ಎಂದರೆ ಸರಿ. ನನ್ನ ತಂದೆಗೆ ಮರಣ ಹೊಂದಿ 30 ವರ್ಷಗಳು ಆಗಿರುತ್ತವೆ ಎಂದರೆ ಸಾಕ್ಷಿಯು 27 ವರ್ಷಗಳು ಆಗಿರುತ್ತವೆ ಎಂದು ನುಡಿಯುತ್ತಾರೆ. ನನ್ನ ತಾಯಿ ಮರಣ ಹೊಂದಿ 14 ವರ್ಷಗಳು ಆಗಿರುತ್ತದೆ.

03. ನನ್ನ ತಂದೆಗೆ ಮರಣ ಹೊಂದ ಮುಂಚೆ ಪಾಶ್ವುವಾಯು ಇತ್ತು ಎಂದರೆ ಸರಿ. ಸದರಿ ಅನಾರೋಗ್ಯದಿಂದ ನನ್ನ ತಂದೆ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿ. ಸದರಿ ನನ್ನ ತಂದೆಗೆ ಯಾವುದೇ ಆದಾಯ ಮೂಲ ಇರಲಿಲ್ಲ ಎಂದರೆ ಸಾಕ್ಷಿಯು ನಾವು ದುಡಿದು ನನ್ನ ತಂದೆಗೆ ನೀಡುತ್ತಿದ್ದೇವು ಎಂದು ನುಡಿಯುತ್ತಾರೆ. ಸದರಿ ದಾವಾ ಆಸ್ತಿಯು ನನ್ನ ತಂದೆಯ ಹೆಸರಿನಲ್ಲಿ ಖರಿದಿ ಆಗಿರುವುದಿಲ್ಲ ಎಂದರೆ ಸಾಕ್ಷಿಯು ನಾವು ದುಡಿದು ಹಣ ಕೊಟ್ಟಿರುತ್ತೆವೆ ನನ್ನ ತಂದೆ ಪ್ರತಿವಾದಿ ನಂ.1 ರವರ ಹೆಸರಿನಲ್ಲಿ ಖರಿದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾವಾ ಆಸ್ತಿಯನ್ನು ರೂ.60,000/- ಗೆ ದಸ್ತಗಿರಿ ಸಾಬ್ ಇವರ ಕಡೆಯಿಂದ ಖರೀದಿ ಮಾಡಿರುತ್ತೇವೆ ದಸ್ತಗಿರಿ ಸಾಬ್ ಇವರಿಗೆ ಖರೀದಿ ಹಣ ನೀಡಿರುತ್ತೇವೆ. ಖರೀದಿ ಮಾಡುವ ಸಮಯದಲ್ಲಿ ದಾವಾ ಆಸ್ತಿಯು ದಸ್ತಗಿರಿ ಸಾಬ್ ನ ಹೆಸರಿನಲ್ಲಿ ಇರುವುದನ್ನು ವಿಚಾರಣೆ ಮಾಡಿರುತ್ತೇವೆ. ನಾನು ನೊಂದಣಿಗೆ ಹೋಗಿರುವುದಿಲ್ಲ ಪ್ರತಿವಾದಿ ನಂ. 1 ರವರು ಹೋಗಿರುತ್ತಾರೆ. ಸದರಿ ಪ್ರತಿವಾದಿ ನಂ. 1 ರವರನ್ನು ಹೊರತುಪಡಿಸಿ ಯಾರು ಇರಲಿಲ್ಲ. ಸದರಿ ಪ್ರತಿವಾದಿ ನಂ.1 ರವರು ದಸ್ತಗಿರಿ ಸಾಬ್ ಇವರ ಕಡೆಯಿಂದ ಖರೀದಿ ಮಾಡಿರುವುದಿಲ್ಲ ನಾನು .ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ

4 ಖರಿದಿ ಮಾಡಿದ ನಂತರ ಪ್ರತಿವಾದಿ ನಂ.1 ರವರೂ ಒಬ್ಬರೇ ಸಾಗುವಳಿ ಮಾಡುತ್ತಿದ್ದರು ಎಂದರೆ ಸಾಕ್ಷಿಯು ನಾವು ಎಲ್ಲರು ಮಾಡುತ್ತಿದ್ದೇವು ಎಂದು ನುಡಿಯುತ್ತಾರೆ. ಸದರಿ ದಾವಾ ಆಸ್ತಿಗಳು ಬಿಟ್ಟು ಬೇರೆ ಆಸ್ತಿಗಳು ಇರುತ್ತವೆ ಎಂದರೆ ಸಾಕ್ಷಿಯು ನನ್ನ ತಂದೆಯ ಹೇಸರಿನಲ್ಲಿ ಇರುತ್ತವೆ ಎಂದು ನುಡಿಯುತ್ತಾರೆ. ನನ್ನ ತಂದೆಯ ಹೆಸರಿನಲ್ಲಿರುವ ಸರ್ವೆ ನಂ. ಹೇಳಲು ಬರುವುದಿಲ್ಲ. ಬಳಿಚಕ್ರ ಗ್ರಾಮದಲ್ಲಿಇರುವ ಮನೆ ನನ್ನ ತಂದೆಯ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸದರಿ ದಾವಾ ಆಸ್ತಿ ಬಿಟ್ಟು ಬೇರೆ ಕುಟುಂಬದ ಆಸ್ತಿಗಳನ್ನು ಸೇರಿಸಿರುವುದಿಲ್ಲ ಎಂದರೆ ಸರಿ. ಸದರಿ ಬೇರೆ ಆಸ್ತಿಗಳನ್ನು ಸೇರಿಸದೇ ಇರುವುದರಿಂದ ಈ ದಾವೆ ಹಾಕಲು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ನಮ್ಮ ಕುಟುಂಬದ ಆಸ್ತಿ ಇರುವುದಿಲ್ಲ

ಎಂದರೆ ಸಾಕ್ಷಿಯು ನಾವು ದುಡಿದು ಖರೀದಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ನಮ್ಮ ಕುಟುಂಬದ ಆಸ್ತಿ ಇಲ್ಲದೇ ಇರುವುದರಿಂದ ದಾವಾ ಹಾಕಲು ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ, ಪ್ರತಿವಾದಿ ನಂ. 1 ರವರ ಸ್ವಯಾರ್ಜಿತ ಆಸ್ತಿ ಇರುವುದರಿಂದ ನಮಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ. 1 ರವರು ನೊಂದಾಯಿತ ಖರಿದಿ ಪತ್ರದ ಮೂಲಕ ಮಾಲೀಕರು ಮತ್ತು ಕಜ್ಜೆದಾರರು ಇರುತ್ತಾರೆ ಎಂದರೆ ಸಾಕ್ಷಿಯು ನನ್ನ ತಂದೆ ಅವರ ಹೇಸರಿನಲ್ಲಿ ಖರಿದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾವಾ ಆಸ್ತಿಯನ್ನು ಅತ್ಕರ್ ಮಹಿಮೂದ್ ಇವರ ಕಡೆಯಿಂದ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಂದೆಯವರು ಖರಿದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ರೂ. 84,000/- ಪ್ರತಿಫಲ ಹಣ ನೀಡಿ ಖರಿದಿ ಮಾಡಿರುತ್ತಾರೆ ಆದರೆ ರೂ. 60,000/- ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರಕ್ಕೆ ನಾವು ಯಾರು ಸಾಕ್ಷಿದಾರರು ಇರುವುದಿಲ್ಲ ಎಂದರೆ ಸಾಕ್ಷಿಯು ನಾವು ಮುಂಬೈಯಲ್ಲಿ ಇದ್ದೇವು ಎಂದು ನುಡಿಯುತ್ತಾರೆ. ಸದರಿ ನಾವು ಬೇರೆ ಇರುವುದರಿಂದ ಯಾವುದೇ ಹಣ ವನ್ನು ಖರಿದಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಮರಣ ಪ್ರಮಾಣ ಪತ್ರವನ್ನು ಹಾಜರು ಪಡಿಸಿರುವುದಿಲ್ಲ. ದಾವಾ ಆಸ್ತಿಯ ಖರೀದಿ ಮಾಡುವ 10 ವರ್ಷ ಪೂರ್ವಾದಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸಾಕ್ಷಿಯು ನಾವು ಹಣ ನೀಡಿರುತ್ತೆವೆ ಎಂದು ನುಡಿಯುತ್ತಾರೆ. ನಾವು ಯಾವುದೇ ಹಣ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ. 1 ರವರು ಪ್ರತಿವಾದಿ ನಂ. 5 ರವರಿಗೆ ಅಡಚಣೆ ಸಲುವಾಗಿ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಮಗೆ ಹೇಳದೆ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವರ್ಗಾವಣೆಯನ್ನು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಮನೆಯವರು ಇರುವುದರಿಂದ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಸಾರಮ್ಮ ರವರು 1 ವರ್ಷದಿಂದ ಕಜ್ಜಬದಲ್ಲಿ ಇರುತ್ತಾರೆ ಎಂದರೆ ಸರಿ. ಪ್ರತಿವಾದಿ ನಂ. 5 ರವರು ಪ್ರತಿವಾದಿ ನಂ. 1 ರವರ ಅಧಿಕಾರದಿಂದ ದಾವಾ ಆಸ್ತಿಯನ್ನು ಖರಿದಿ ಮಾಡಿ ಮಾಲೀಕರು ಮತ್ತು ಕಜ್ಜಬದಾರರು ಆಗಿರುತ್ತಾರೆ ಎಂದರೆ ಸರಿ.ನಾನು ಪ್ರತಿವಾದಿ ನಂ.1 ರವರಿಗೆ ತೊಂದರೆ ಕೊಡುವುದರಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ವಿಚಾರಣೆ ಇಲ್ಲ.</u>**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ**